ವಿ. ರಶ್ಮಿ ಮಹೇಶ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

**V. Rashmi Mahesh, I.A.S.,**
Principal Secretary to Government
Backward Classes Welfare Department

ಕರ್ನಾಟಕ ಸರ್ಕಾರ ಸಚಿವಾಲಯ
ಕೊಠಡಿ ಸಂಖ್ಯೆ: 203, 2ನೇ ಮಹಡಿ
ವಿಕಾಸ ಸೌಧ, ಬೆಂಗಳೂರು – 560 001
ದೂ: 080-22252163/22034499

Karnataka Government Secretariat
Room No. 203, 2nd Floor
Vikasa Soudha, Bengaluru - 560 001
Off : (080) 2225 2163, 2203 4499
Fax : (080) 2225 5171
E-mail : prsecy-bcw@karnataka.gov.in
prsecybcw@gmail.com

E- 335/122 -2021
04/12/2021

ಸಂಖ್ಯೆ: ಹಿಂವಕ 303 ಬಿಇಟಿ 2021

ದಿನಾಂಕ: 03.12.2021

ಮಾನ್ಯರೆ,

**ವಿಷಯ:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ/ಆಶ್ರಮ ಶಾಲೆಗಳು/ವಸತಿ ಶಾಲೆಗಳ ಪ್ರಸ್ತುತ ವಸ್ತುಸ್ಥಿತಿ ಮಾಹಿತಿಯನ್ನು ಒದಗಿಸುವ ಬಗ್ಗೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು, ಆಶ್ರಮ ಶಾಲೆಗಳು ಹಾಗೂ ಕ್ರೈಸ್ ಸಂಸ್ಥೆಯ ಅಧೀನದಲ್ಲಿ ಬರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ಶಾಲೆಗಳು / ಪದವಿ ಪೂರ್ವ ಕಾಲೇಜುಗಳು ನಿರ್ವಹಣೆಯಾಗುತ್ತಿದೆ. ಇತ್ತೀಚೆಗೆ ನಡೆದ ಭರವಸೆಗಳ ಸಮಿತಿ ಸಭೆಯಲ್ಲಿ ಇಲಾಖೆಯ ಅಧೀನದಲ್ಲಿ ನಡೆಯುತ್ತಿರುವ ಕೆಲವು ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು, ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಹಾಗೂ ಆಶ್ರಮ ಶಾಲೆಗಳನ್ನು ಹಲವಾರು ವರ್ಷಗಳಿಂದ ಸ್ಥಗಿತಗೊಳಿಸಿ, ಹುದ್ದೆಗಳನ್ನು ಬೇರೆಡೆಗೆ ವರ್ಗಾಯಿಸಲಾಗಿದೆ. ಇಂತಹ ವಿದ್ಯಾರ್ಥಿ ನಿಲಯಗಳ / ಆಶ್ರಮ ಶಾಲೆಗಳ ಕಟ್ಟಡಗಳನ್ನು ಯಾವುದೇ ಬಳಕೆ ಮಾಡದೆ ಬಿಡಲಾಗಿದೆ, ಅಲ್ಲದೆ ಇಂತಹ ವಿದ್ಯಾರ್ಥಿ ನಿಲಯಗಳ ಸಂಖ್ಯೆಯನ್ನು ಒಟ್ಟಾರೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ / ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆಯಲ್ಲಿ ಕಡಿತಗೊಳಿಸದೆ ಮಾಹಿತಿಯನ್ನು ನೀಡಲಾಗುತ್ತಿದೆ ಎಂದು ಪ್ರಸ್ತಾಪಿಸಿರುತ್ತಾರೆ ಹಾಗೂ ಇಂತಹ ಕಟ್ಟಡಗಳ ಮಾಹಿತಿಯನ್ನು ಪಡೆದು ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸೂಚಿಸಿರುತ್ತಾರೆ.

ಆದಕಾರಣ, ಈ ಕೆಳಕಂಡ ನಮೂನೆಯಂತೆ ದೃಢೀಕೃತ ಮಾಹಿತಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ರವರ ಮುಖಾಂತರ ಎಲ್ಲಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರಿಂದ ಪಡೆದು, ಕ್ರೋಢೀಕರಿಸಿ ಒಂದು ವಾರದೊಳಗೆ ಸಲ್ಲಿಸುವಂತೆ ಕೋರಿದೆ.

...2

| ಕ್ರ.ಸಂ | ಹಾಲಿ ಕಾರ್ಯನಿರ್ವಹಿಸದೇ ಇರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಮತ್ತು ಆಶ್ರಮ ಶಾಲೆಗಳ ಪೂರ್ಣ ವಿಳಾಸ ಹಾಗೂ ಸದರಿ ಕಟ್ಟಡಗಳಿಗೆ ನೀಡಿರುವ BCWD ಸಂಖ್ಯೆ ಹಾಗೂ ಸಂಖ್ಯಾಬಲ | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ವಸತಿ ಶಾಲೆ ಮತ್ತು ಆಶ್ರಮ ಶಾಲೆಯನ್ನು ಸ್ಥಗಿತಗೊಳಿಸಿರುವ ಕಾರಣ ಹಾಗೂ ವರ್ಷ | ಹುದ್ದೆಗಳನ್ನು ವರ್ಗಾಯಿಸಿರುವ ವಿದ್ಯಾರ್ಥಿನಿಲಯ, ವಸತಿಶಾಲೆ/ಆಶ್ರಮ ಶಾಲೆ ಹಾಗೂ ಆದೇಶ ಸಂಖ್ಯೆ ಮತ್ತು ದಿನಾಂಕ | | | | ಪ್ರಸ್ತುತ ಸ್ಥಗಿತಗೊಂಡಿರುವ ವಿದ್ಯಾರ್ಥಿನಿಲಯ, ವಸತಿಶಾಲೆ/ಆಶ್ರಮ ಶಾಲೆ ಕಟ್ಟಡದ ವಸ್ತುಸ್ಥಿತಿ | | | ಷರಾ |
|---|---|---|---|---|---|---|---|---|---|---|
| | | | ಹುದ್ದೆಗಳನ್ನು ವರ್ಗಾಯಿಸಿರುವ ವಿದ್ಯಾರ್ಥಿನಿಲಯ ವಸತಿಶಾಲೆ/ಆಶ್ರಮ ಶಾಲೆಗಳ ವಿವರ ಮತ್ತು ವಿಳಾಸ | ವರ್ಗಾಯಿಸಿರುವ ಹುದ್ದೆಗಳ ವೃಂದವಾರು ಮಾಹಿತಿ | | ವರ್ಗಾಯಿಸಿರುವ ಆದೇಶ ಸಂಖ್ಯೆ ಮತ್ತು ದಿನಾಂಕ | ಕಟ್ಟಡದ ವಿಸ್ತೀರ್ಣ | ಖಾಲಿ ಜಾಗದ ವಿಸ್ತೀರ್ಣ | ಒಟ್ಟು ವಿಸ್ತೀರ್ಣ | |
| | | | | ಹುದ್ದೆ | ಸಂಖ್ಯೆ | | | | | |
| | | | | | | | | | | |

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**ಇವರಿಗೆ,**

ಶ್ರೀ ಪಿ. ವಸಂತ್‌ಕುಮಾರ್, ಭಾ.ಆ.ಸೇ.,
ಆಯುಕ್ತರು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

**ಪ್ರತಿ – ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:**

1. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
2. ಎಲ್ಲಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.